**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,**
**ನ.ರಾ.ಪುರ.**
**ಸಿ.ಸಿ. ನಂ ಃ106/2025**

ಸಾಕ್ಷಿದಾರರ ಹೆಸರು ಃ ಶ್ರೀಮತಿ ಜ್ಯೋತಿ ಸಿ.ಡಬ್ಲ್ಯು - 06
ಗಂಡನ ಹೆಸರು ಃ ಅನಿಲ್ ಕುಮಾರ್ ಪಿ.ಡಬ್ಲ್ಯು - 06
ವಯಸ್ಸು ಃ 44 ವರ್ಷ
ಉದ್ಯೋಗ ಃ ಕೂಲಿ
ವಾಸಸ್ಥಳ ಃ ಚಿಕ್ಕಗ್ರಹಾರ, ಎನ್ ಆರ್ ಪುರ.

ದಿನಾಂಕಃ **24/02/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ

ಚಾಸಾ 1 ನನ್ನ ಗಂಡನಾಗಬೇಕು. ಚಾಸಾ 2 ರಿಂದ 5 ರವರ ಪರಿಚಯ ಇರುತ್ತದೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ನನಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರನ್ನು ನಾನು ನೋಡಿರುವುದಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಮ್ಮ ಮನೆಯು ಆಡುವಳ್ಳಿ ಗ್ರಾಮದ ಚಿಕ್ಕಗ್ರಹಾರದಲ್ಲಿ ಇದ್ದು, ನಮಗೆ ತೋಟ ಇದ್ದ ಕಾರಣ ವಾರಕ್ಕೊಮ್ಮೆ ಊರಿಗೆ ಬಂದು ಹೋಗುತ್ತಿದ್ದೆವು. ಬೇರೆ ಸಮಯದಲ್ಲಿ ನಮಗೆ ಸಂಬಂಧಿಸಿದ ತೋಟವನ್ನು ನನ್ನ ಭಾವ ಮತ್ತು ಅವರ ಮಕ್ಕಳು ನೋಡಿಕೊಳ್ಳುತ್ತಿದ್ದರು.

2. ದಿಃ 05/08/2025 ರಂದು ನಾನು ಮತ್ತು ನನ್ನ ಗಂಡ ಮನೆಗೆ ಬಂದು ತೋಟಕ್ಕೆ ಗೊಬ್ಬರ ಹಾಕಿ ಆ ದಿನ ಅಲ್ಲೇ ಉಳಿದುಕೊಂಡಿದ್ದು ಬೆಳಿಗ್ಗೆ ನಾವು ಪುನಃ ಶೃಂಗೇರಿಗೆ ಕೆಲಸಕ್ಕೆ ಹೋದೆವು. ಪುನಃ ನಾನು ಮತ್ತು ನನ್ನ ಗಂಡ ದಿಃ 15/08/2025 ರಂದು ನಮ್ಮ ಊರಾದ ಚಿಕ್ಕಗ್ರಹಾರದ ಮನೆಗೆ ಬಂದಿದ್ದು, ಆಗ ಮನೆಯನ್ನು ನೋಡಲಾಗಿ ಸದರಿ ಮನೆಯ ಬೀಗವನ್ನು ಒಡೆಯಲಾಗಿದ್ದು, ನಾವು ಒಳಗೆ ಹೋಗಿ ನೋಡಿದಾಗ ಮನೆಯಲ್ಲಿದ್ದ ಗೋದ್ರೇಜ್ ಬೀರುವಿನ ಹ್ಯಾಂಡಲ್ ಕಟ್ಟಾಗಿದ್ದು, ಅದರಲ್ಲಿ 11 ಸಾವಿರ ರೂ. ನಗದು ಮತ್ತು 5 ಗ್ರಾಮ್ ತೂಕದ ಬಂಗಾರದ ಉಂಗುರ ಇಟ್ಟಿದ್ದು ಹಾಗೂ ಮನೆಯಲ್ಲಿ ಎರಡು ಹಂಡೆ ಮತ್ತು ಎರಡು

ಕೊಡಪಾನಗಳನ್ನು ಹಾಗೂ ಅರ್ಧ ಹೆಚ್ ಪಿ ಕರೆಂಟ್ ಮೋಟರ್ ಕಳ್ಳ ತನ ಆಗಿದೆ ಎಂದು ನನ್ನ ಗಂಡ ದೂರಿನಲ್ಲಿ ಹೇಳಿದ್ದು ಆದರೆ ಗಡಿಬಿಡಿಯಲ್ಲಿ ಆ ವಿಚಾರವನ್ನು ಹೇಳಿರುತ್ತಾರೆ . ಸದರಿ ಹಣ, ಬಂಗಾರ, ಹಂಡೆ, ಕೊಡಪಾನ ಹಾಗೂ ಮೋಟರನ್ನು ನಾನು ತೆಗೆದುಕೊಂಡು ಹೋಗಿದ್ದು . ನಮ್ಮ ಮನೆಯಲ್ಲಿದ್ದ ಒಂದು ಗ್ಯಾಸ್ ಸಿಲಿಂಡರ್, 2 ಒಲೆಯ ಸ್ಟೌವ್, ಒಂದು ಸೋಲಾರ್ ಚಾರ್ಜರ್ ಬ್ಯಾಟರಿ, ಇಸ್ತ್ರಿ ಪೆಟ್ಟಿಗೆ ಹಾಗೂ ಸೋಲಾರ್ ಪ್ಯಾನಲ್ ಅನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿದ್ದು, ಸದರಿ ಕಳ್ಳತನ ಮಾಡಿದ ವಸ್ತುಗಳ ಅಂದಾಜು ಮೌಲ್ಯ 15 ಸಾವಿರ ರೂ. ಆಗಿರುತ್ತದೆ. ದಿಃ 18/08/2025 ರಂದು ಆರೋಪಿತರು ಸಿಕ್ಕಿರುತ್ತಾರೆ ಎಂದು ತಿಳಿಸಿರುತ್ತಾರೆ. ಹಾಗೂ ಆರೋಪಿತರು ಇಂಡಿಯನ್ ಗ್ಯಾಸ್ ಸಿಲಿಂಡರ್, ಸುಕುಮ್ ಪವರ್ ಸಿಸ್ಟಂ ನ ಸೋಲಾರ್ ಪ್ಯಾನೆಲ್, ಒಂದು ಬ್ಯಾಟರಿ ಹಾಗೂ ಎರಡು ಒಲೆ ಇರುವ ಗ್ಯಾಸ್ ಸ್ಟವ್ ಮತ್ತು ಕರೆಂಟ್ ಇಸ್ತ್ರಿ ಪೆಟ್ಟಿಗೆಯನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು, ಅದರಲ್ಲಿ ಭಾನುಪ್ರಕಾಶ್ ಇವರಿಗೆ ಗ್ಯಾಸ್ ಸಿಲಿಂಡರ್, ಸೋಲಾರ್ ಪ್ಯಾನೆಲ್, ಬ್ಯಾಟರಿಯನ್ನು ಮಾರಾಟ ಮಾಡಿರುವುದಾಗಿ ಮತ್ತು ಎರಡು ಒಲೆ ಇರುವ ಗ್ಯಾಸ್ ಸ್ಟವ್ ಹಾಗೂ ಕರೆಂಟ್ ಇಸ್ತ್ರಿ ಪೆಟ್ಟಿಗೆಯನ್ನು ಗಡಿಗೇಶ್ವರ ವಾಸಿ ಮಹೇಶ್ ರವರಿಗೆ ಹಣಕ್ಕೆ ಮಾರಾಟ ಮಾಡಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಂಬಂಧ ಈಗ ಓದಿ ಹೇಳಿದ ನಿಪಿ 21 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ 21 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎನ್ನುತ್ತಾರೆ.

ಮರು ವಿಚಾರಣೆ ಃ ಇಲ್ಲ ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ